2-30 P.M.

(iv) ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಧರ್ಮ ಪ್ರಾಜೆಕ್ಟ್‌ನ್ನು ರೀ-ಮಾಡಲಿಂಗ್ ಮಾಡುವುದು

ಶ್ರೀ ಸಿ. ಎಂ. ಉದಾಸಿ.- (ಹಾನಗಲ್) ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕಿನ ನೆರವಿನೊಂದಿಗೆ ಧರ್ಮ ಪ್ರೊಜೆಕ್ಟ್ ರೀ ಮಾಡ್ಲಿಂಗ್ ತೆಗೆದುಕೊಳ್ಳಲು ಸರಕಾರದಲ್ಲಿ ಪರಿಶೀಲನೆ ಇದ್ದದ್ದು, ಈವರೆಗೂ ಕಾರ್ಯಗತವಾಗದೇ ಇರುವುದರಿಂದ ನೀರಾವರಿಯ ಯೋಜನೆ ಪೂರ್ಣ ಪ್ರಮಾಣದಲ್ಲಿ ರೈತರಿಗೆ ಸಿಕ್ಕಿಲ್ಲ ವೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ ಇದನ್ನು ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ದೊರಕಿಸಿಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

(v) ತಾಲ್ಲೂಕು ರಸ್ತೆಗಳಮೇಲೆ ರೈತರು ತಮ್ಮ ದವಸಧಾನ್ಯಗಳನ್ನು ಹಾಕಿಕೊಂಡು ಪ್ರಾಯಾಣಕ್ಕೆ ತೊಂದರೆ ಕೊಡುತ್ತಿರುವುದು.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ರಾಜ್ಯದ ಎಲ್ಲಾ ತಾಲ್ಲೂಕುಗಳ ಎಲ್ಲಾ ಹಳ್ಳಿಗಳ ಮೂಲಕ ಹಾದು ಹೋಗುವ ಲೋಕೋಪಯೋಗಿ ರಸ್ತೆಗಳ ಮೇಲೆ ಅಧಿಕವಾದ ವಾಹನಗಳ ಸಂಚಾರ ವಿದ್ದಾಗ್ಯೂ, ರೈತರುಗಳು ತಾವು ಬೆಳೆದ ಎಲ್ಲಾ ವಿಧವಾದ ತೆನೆಗಳ ರಾಶಿಯನ್ನು ರಸ್ತೆಗಳ ಮೇಲೆ ಎತ್ತರವಾಗಿ ಹಾಕಿ, ವಾಹನಗಳ ಸಂಚಾರಕ್ಕೆ ಅಡ್ಡಿ ಪಡಿಸುತ್ತಿರುವುದರಿಂದಲೂ ರಸ್ತೆಗಳ ಒಡಿಯಲ್ಲಿ ಧಾನ್ಯಗಳ ಹೊಟ್ಟನ್ನು ತೂರಿ ಪ್ರಯಾಣಿಕರ ಮೈಬೇಟೆಲ್ಲಾ ಧೂಳು ತುಂಬುವಂತೆ ಮಾಡುತ್ತಿರುವುದರಿಂದಲೂ, ಈ ಅಸಹ್ಯ ಕೆಲಸವನ್ನು ಎಲ್ಲಾ ಇಲಾಖೆಯ ಎಲ್ಲಾ ದರ್ಜೆಯ ಅಧಿಕಾರಿಗಳು ನೋಡಿಕೊಂಡು ಅಸಹಾಯಕರಾಗಿ ವರ್ತಿಸುತ್ತಿದ್ದಾರೆ. ಇದರಿಂದ ಪ್ರಯಾಣಿಕರಿಗೆ ಆಗುವ ತೊಂದರೆಯ ತೀವ್ರತೆಯನ್ನು ಮಾನ್ಯ ಲೋಕೋಪಯೋಗಿ ಹಾಗೂ ಕಾಮಗಾರಿಗಳ ಸಚಿವರು ಮನಗಂಡು ಇನ್ನು ಮುಂದೆ ಇದು ಎಲ್ಲಿಯೂ ನಡೆಯದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ಪಟವಂಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ಸದನದ ಗಮನಕ್ಕೆ ತರಬೇಕು, ಆ ಮೇಲೆ ಮಂತ್ರಿಗಳು ಉತ್ತರ ಕೊಡುತ್ತಾರೆ, ಇಲ್ಲವೇ ಅವರ ಪರವಾಗಿ ಬೇರೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏಕೆ ತರಬೇಕು, ಅವರು ಇರುತ್ತಾರೆಂದು ಓದಬಹುದು. ಬರೀ ಗಮನಕ್ಕೆ ತರುವುದಾದರೆ ನಾವೂ, ನೀವೂ ಸಾಕು. ಇವೊತ್ತು ಕೊನೆಯ ದಿವಸ, ಇಲ್ಲಿ ಒಬ್ಬ ಮಂತ್ರಿಗಳೂ ಇಲ್ಲ. ನಾವು ಯಾರನ್ನು ಕೇಳಬೇಕು ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಎರಡು ಕಡೆಯವರು ಸರಿಯಾಗಿ ಹೋಗಿ ಎಂದರೆ ಕಡೆಯ ದಿವಸ ಜಗಳ ತೆಗೆಯುತ್ತಿದ್ದೀರಿ. ಇಲ್ಲಿಯವರೆಗೂ ನೀವೂ, ಅವರು ಸರಿಯಾಗಿ ಹೋಗಿದ್ದೀರಿ, ಈಗ ಸರಿಯಾಗಿ ಹೋಗಿ ಎಂದು ಹೇಳಿದರೆ, ಕಾಲು ಕೆರೆದು ಜಗಳ ತೆಗೆಯುತ್ತೀರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮಗೇ ಗೊತ್ತಿದೆ ನಾವು ಏನೋ ಮಹತ್ವದ ಪ್ರಶ್ನೆಹಾಕುತ್ತೇವೆ ಕೆಲಸ ಆಗಬೇಕೆಂಬ ದೃಷ್ಟಿಯಿಂದ, ನ್ಯಾಯ ಸಿಗಬೇಕು, ಶಾಂತಿಯಾಗಬೇಕೆಂದು ಕೇಳುತ್ತೇವೆ. ಇಲ್ಲಿ ಉತ್ತರ ಹೇಳುವವರು ಇಲ್ಲ.